Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 19 | 7th November 2024

## ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ
## "ಗಂಗಾ ತರಂಗ"
## ವಿಶ್ಲೇಷಣೆ

Time : 7.00 p.m.
Venue : Hotel Shivaprasad Grand, Kundapura



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

**39th year of Service and Fellowship**

## ವಾರದ ಸಭೆಯ ವರದಿ




ತಾರೀಕು 31–10–2024ರ ನಮ್ಮ ಸಾಪ್ತಾಹಿಕ ಸಭೆಯು ದೀಪಾವಳಿ ಹಬ್ಬದ ಆಚರಣೆಯಾಗಿ ವಿಭಿನ್ನ ರೀತಿಯಲ್ಲಿ ನಡೆಸಲಾಯಿತು. ಹಣತೆಯ ದೀಪಗಳ ಬೆಳಕಿನಿಂದ ಅಲಂಕೃತಗೊಂಡ ಹೆಬ್ಬಾಗಿಲ ಮೂಲಕದ ಪ್ರವೇಶವೇ ಸದಸ್ಯರಿಗೆ ಪುಳಕದ ಅನುಭವವನ್ನು ನೀಡಿತು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು. ಹಂಗಾಮಿ ಕಾರ್ಯದರ್ಶಿಯಾಗಿ ರೊ. ಕೆ. ಕೆ. ಕಾಂಚನ್‌ರವರು ಕಳೆದ ವಾರದ ವರದಿಯನ್ನು ನೀಡಿದರು. ರೊ. ವಿವಿಯನ್ ಕ್ರಾಸ್ಟೋರವರು ವಾರದ ಚಿಂತನೆಯನ್ನು ನೀಡುತ್ತಾ "ನಮ್ಮ ಸುಪ್ತ ಮನಸ್ಸಿನಲ್ಲಿ ದೇವರು ಮತ್ತು ರಾಕ್ಷಸರು ಇಬ್ಬರೂ ಇರುತ್ತಾರೆ. ಆದರೆ ಭಕ್ತಿ ಮತ್ತು ದೈವಶಕ್ತಿ ಇದ್ದಲ್ಲಿ ನಾವು ಸುರಕ್ಷಿತರಾಗಿರುತ್ತೇವೆ" ಎಂದರು. ರೋಟರಿ ಮಾಹಿತಿ ನೀಡಿದ ರೊ. ಕೆ. ಕೆ. ಕಾಂಚನ್‌ರವರು "4 ಜನ ಸ್ನೇಹಿತರಿಂದ ಸ್ನೇಹತ್ವಕ್ಕಾಗಿ ಸ್ಥಾಪಿಸಲ್ಪಟ್ಟ ರೋಟರಿ ಸಂಸ್ಥೆಯು 1908ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಸಾರ್ವಜನಿಕರಿಗಾಗಿ ಒಂದು ಉಚಿತ ಶೌಚಾಲಯವನ್ನು ಸ್ಥಾಪಿಸಿ, ಸಮುದಾಯ ಸೇವೆಯ ಪ್ರಥಮ ಕಾರ್ಯವನ್ನು ಸಮಾಜಕ್ಕೆ ಅರ್ಪಿಸಿತು. ಎನ್ನುವ ಮಾಹಿತಿಯನ್ನು ನೀಡಿದರು. ನಂತರ ಅಧ್ಯಕ್ಷರು ತಮ್ಮ ಮಾತಿನಲ್ಲಿ "ಇಂದು ಭಾರತದಲ್ಲಿ ಆಚರಿಸುವ ದೀಪಾವಳಿ ಹಬ್ಬವು ಬೆಳಕಿನ ಹಬ್ಬವಾಗಿ ಪ್ರತಿಯೊಬ್ಬ ಭಾರತೀಯರ ಮನೆಯಲ್ಲಿ ಏಳಿಗೆಯ ಹಬ್ಬವಾಗಲಿ. ನಮ್ಮ ಎಲ್ಲಾ ರೋಟರಿ ಸದಸ್ಯರಿಗೆ ದೀಪಾವಳಿಯ ಶುಭ ಹಾರೈಕೆಗಳನ್ನು ಸಲ್ಲಿಸುತ್ತೇನೆ" ಎಂದರು ಹಾಗೂ ಮುಂದಿನ ಭಾನುವಾರ ನಡೆಯುವ ವಲಯ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸುವ ನಮ್ಮ ಸದಸ್ಯರಿಗೆ ಉತ್ತೇಜಿಸಲು ಎಲ್ಲಾ ಸದಸ್ಯರೂ ಇದರಲ್ಲಿ ಭಾಗಿಯಾಗಿ" ಎಂದು ಕರೆ ನೀಡಿದರು. ಮಳೆಯ ಕಾರಣಕ್ಕೆ ಸದಸ್ಯರು ಪಟಾಕಿ ಸಿಡಿಸಿ ಸಂಭ್ರಮಿಸುವ ಕಾರ್ಯವನ್ನು ಮಾಡಲು ಸಾಧ್ಯವಾಗದಿದುರಿಂದ ಎಲ್ಲಾ ಸದಸ್ಯರು ದೀಪಾವಳಿಯ ಸಿಹಿಯನ್ನು ಹಂಚಿಕೊಂಡು ಸಂಭ್ರಮಿಸಿದರು. ಲಕ್ಕಿ ರೋಟೇರಿಯನ್ ಆಗಿ ರೊ. ಕೆ. ಕೆ. ಕಾಂಚನ್‌ರವರು ಆಯ್ಕೆಯಾದರು. ರೊ. ಜೆರಾಲ್ಡ್ ಕ್ರಾಸ್ಟೋರವರು ನಗೆಹನಿಯನ್ನು ಸಿಡಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಸಮಾಪ್ತಿಗೊಳಿಸಲಾಯಿತು.










**ದಿನಾಂಕ 03/11/24 ರ ಭಾನುವಾರದಂದು ರೋಟರಿ ಕ್ಲಬ್ ಗಂಗೊಳ್ಳಿ ಇದರ ಆತಿಥ್ಯದಲ್ಲಿ ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ 'ಗಂಗಾ ತರಂಗ' ದಲ್ಲಿ ದೊರೆತ ಪ್ರಶಸ್ತಿ ಫಲಕ ಹಾಗೂ ಪ್ರಶಸ್ತಿ ಪತ್ರ.**

## ಕಳೆದ ವಾರದ ಚಿಂತನೆ

ನಮ್ಮ ಮನಸ್ಸಿನ ಆರನೆಯ ಇಂದ್ರಿಯದಲ್ಲಿ ರಕ್ಷಕನೂ ಇದ್ದಾನೆ. ರಾಕ್ಷಸನೂ ಇದ್ದಾನೆ. ಮೋಸದ ನರಿಯೂ ಇದೆ. ನಿಯತ್ತಿನ ನಾಯಿಯೂ ಇದೆ. ಹುಲಿಯೂ ಇದೆ. ಇಲಿಯೂ ಇದೆ. ರಾಮನು ಇದ್ದಾನೆ, ರಾವಣನೂ ಇದ್ದಾನೆ. ಪಾಂಡವರೂ ಇದ್ದಾರೆ, ಕೌರವರೂ ಇದ್ದಾರೆ. ಹಾಗೆಯೇ ಇವರೆಲ್ಲರನ್ನೂ ನಿಯಂತ್ರಿಸಲು ಕೃಷ್ಣನೂ ಇದ್ದಾನೆ.

**ನೀಡಿದವರು : ರೊ. ವಿವಿಯನ್ ಕ್ರಾಸ್ಟೋ**

ದಿನಾಂಕ 03/11/24 ರ ಭಾನುವಾರದಂದು ರೋಟರಿ ಕ್ಲಬ್ ಗಂಗೊಳ್ಳಿ ಇದರ ಆತಿಥ್ಯದಲ್ಲಿ ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ 'ಗಂಗಾ ತರಂಗ' ಬಹಳ ವಿಜೃಂಭಣೆಯಿಂದ ಸ. ಹಿ. ಪ್ರಾ. ಶಾಲೆ ಆವರಣ, ಗುಜ್ಜಾಡಿ ಇಲ್ಲಿ ನೆರವೇರಿತು. ವಲಯದ 8 ಕ್ಲಬ್‌ಗಳಿಂದ ಈ ಸ್ಪರ್ಧೆ ಆಗಮಿಸಿದ್ದರು. ನಮ್ಮ ಕ್ಲಬ್ಬಿನ ಸದಸ್ಯರಾಗಿರುವ ರೊ. ಡಾ. ಪ್ರಿಯಾಂಕಾ ಜೋಗಿ ಭಾವಗೀತೆ ಸ್ಪರ್ಧೆಯಲ್ಲಿ ಸ್ಪರ್ಧಿಸಿದ್ದರು. ಆ್ಯನ್ ನಯನ ಭಟ್ ರಂಗೋಲಿಯಲ್ಲಿ, ಜಾನ್ ಚಿನ್ಮಯ್ ಜೋಗಿ ಚಿತ್ರಕಲೆಯಲ್ಲಿ ಭಾಗವಹಿಸಿದ್ದರೆ, ರೊ. ರಮಾನಂದ ಕಾರಂತರು ಚಿತ್ರಗೀತೆ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ರೊ. ಪ್ರಕಾಶ್ ಲೋಬೊ ಹಾಗೂ ಆ್ಯನ್ ರಶ್ಮಿ ಶೇಟ್ ಯುಗಳ ಗೀತೆ ವಿಭಾಗದಲ್ಲಿ ಸ್ಪರ್ಧಿಸಿ ಉತ್ತಮವಾಗಿ ಹಾಡಿದರು. ಬಹಳ ದಿನಗಳಿಂದ ಅಭ್ಯಾಸ ನಿರತರಾಗಿದ್ದು ಸಮೂಹ ಗಾಯನದ ಸ್ಪರ್ಧೆಯಲ್ಲಿ ಕ್ಲಬ್‌ನ ಸದಸ್ಯರಾಗಿರುವ ರೊ. ಸಚಿನ್ ನಕ್ಕತಾಯ, ರೊ. ಜೆರಾಲ್ಡ್ ಕ್ರಾಸ್ತಾ, ರೊ. ಜಾನ್ಸನ್ ಆಲ್ಮೇಡಾ, ರೊ. ಪ್ರಕಾಶ್ ಲೋಬೊ, ರೊ. ಡಾ. ಪ್ರಿಯಾಂಕಾ ಜೋಗಿ, ರೊ.ಡಾ. ಅನುಲೇಖ ಬಾಯರಿ, ಆನ್ ಶಾಂತ ಕಾಂಚನ್, ಆನ್ ಹಾಗೂ ಇನ್ನರ್‌ವೀಲ್ ಕಾರ್ಯದರ್ಶಿ ಸುಮಾ ಪುತ್ರನ್, ಆನೆಟ್ ಆರಾಧ್ಯ ಬಾಯರಿ ಒಕ್ಕೊರಲಿನಿಂದ ದೇಶಭಕ್ತಿ ಗೀತೆಯನ್ನು ಹಾಡಿದರು.

18 ವರ್ಷ ಒಳಗಿನ ಆನೆಟ್‌ಗಳಿಗೆ ಏರ್ಪಡಿಸಿದ್ದ ಏಕವ್ಯಕ್ತಿ ನೃತ್ಯ ಸ್ಪರ್ಧೆಯಲ್ಲಿ ಆರಾಧ್ಯ ಬಾಯರಿ ಭರತನಾಟ್ಯವನ್ನು ಪ್ರದರ್ಶಿಸಿ ತೃತೀಯ ಬಹುಮಾನ ಗಳಿಸಿದಳು. ಲಘು ಪ್ರಹಸನ ಸ್ಪರ್ಧೆಗೆ ರೊ. ಉಮೇಶ್ ಪುತ್ರನ್‌ರವರು ಬರೆದಿರುವ **ಸ್ವಾತಂತ್ರ್ಯದ ಈ ಕ್ಷಣಗಳು** ಎಂಬ ಪುಸ್ತಕದಿಂದ ಆಯ್ದ ಭಾಗವಾದ ಉಪ್ಪಿನ ಸತ್ಯಾಗ್ರಹ ಎಂಬ ಕಥಾವಸ್ತುವನ್ನು ರಾಷ್ಟ್ರಪ್ರಶಸ್ತಿ ವಿಜೇತ ಕಲಾವಿದರಾದ ರೊ. ರಾಮ ಶೆಟ್ಟಿ ಹಾರಾಡಿ ನಿರ್ದೇಶನದಲ್ಲಿ skit ನನ್ನ ಕ್ಲಬ್ಬಿನ ಸದಸ್ಯರಿಂದ ಪ್ರದರ್ಶಿಸಲ್ಪಟ್ಟು ದ್ವಿತೀಯ ಬಹುಮಾನ ಗಳಿಸಿದ್ದು ಬಹಳ ಹೆಮ್ಮೆಯ ವಿಷಯ. ಈ ಪ್ರಸಂಗದಲ್ಲಿ ಮಹಾತ್ಮ ಗಾಂಧಿ ಪಾತ್ರಧಾರಿಯಾಗಿ ರೊ.ಡಾ. ಉತ್ತಮ ಕುಮಾರ್ ಶೆಟ್ಟಿ ಅಭಿನಯಿಸಿದರೆ, ಸರೋಜಿನಿ ನಾಯ್ಡು ಪಾತ್ರವನ್ನು ಆ್ಯನ್ ಸುಮಾ ಪುತ್ರನ್‌ರವರು ನಿಭಾಯಿಸಿದರು. ಪೊಲೀಸರ ಪಾತ್ರದಲ್ಲಿ ರೊ. ಸಚಿನ್ ನಕ್ಕತ್ತಾಯ, ರೊ.ಡಾ. ಆದರ್ಶ ಹೆಬ್ಬಾರ್, ರೊ. ಜಾನ್ಸನ್ ಅಭಿನಯಿಸಿದರು. ಸ್ವಾತಂತ್ರ್ಯ ಹೋರಾಟಗಾರರಾಗಿ ರೊ. ಸಂತೋಷ್ ಕುಮಾರ್ ಶೆಟ್ಟಿ, ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸ, ಕಾರ್ಯದರ್ಶಿ ರೊ. ಭರತ್ ಶೆಟ್ಟಿ, ರೊ. ರಮಾನಂದ ಕಾರಂತ್ ರೊ. ಜೆರಾಲ್ಡ್,ರೊ. ಕೃಷ್ಣ ಕಾಂಚನ್, ಡಾ. ವನಿತ ಲಕ್ಷ್ಮಿ, ಜೋನ್ ಸಿಯೋನ್ ಮೆಂಡೋನ್ಸ ಅಭಿನಯಿಸಿದರು. ರೊ. ಸುಪ್ರೀತ್ ಚಾತ್ರಾ ಹಾಗೂ ಆ್ಯನ್ ಮೇಘಾರವರು ಸಹಕರಿಸಿದರು. ಅತ್ಯಂತ ಅಚ್ಚುಕಟ್ಟಾದ ಆಡಂಬರವಿಲ್ಲದ ಈ ಲಘು ಪ್ರಹಸನವು ಎಲ್ಲರ ಉತ್ಸಾಹ, ಮನೋಜ್ಞ ಅಭಿನಯ, ಸಮಯ ಪ್ರಜ್ಞೆ, ಉತ್ತಮ ಕಥಾ ವಸ್ತು, ಸರಿಯಾದ ಅಭ್ಯಾಸದಿಂದ ದ್ವಿತೀಯ ಸ್ಥಾನಿಯಾಗಿ ಹೊರಹೊಮ್ಮಲು ಸಾಧ್ಯವಾಯಿತು.





